**2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು**

**ಸಿ.ಸಿ 703-2017** **ಪಿ. ಡಬ್ಲುಃ 03**

**ಸಿ. ಡಬ್ಲುಃ 02**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ / ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ನಟೇಶ್<br>ಗೋಪಾಲಕೃಷ್ಣ<br>52 ವರ್ಷ<br>ಸಹಾಯಕ ತಾಂತ್ರಿಕ ಅಧಿಕಾರಿ,<br>ಲೋಕೋಪಯೋಗಿ ಇಲಾಖೆ<br>ಮೈಸೂರು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 23-11-2022 |

**ಪಾಟೀ ಸವಾಲು ಆರೋಪಿಗಳ ಪರ ಶ್ರೀ.ಎನ್.ಜಿ.ಬಿ ವಕೀಲರಿಂದಃ**

ನಾನು 2017 ಕ್ಕಿಂತ ಪೂರ್ವದಲ್ಲಿಯೂ ಸಹ ಸುಮಾರು 5-6 ಭಾರಿ ಚುನಾವಣಾ ಅಧಿಕಾಯಾಗಿ ಕರ್ತವ್ಯ ನಿರ್ವಹಿಸಿರತ್ತೇನೆ. ಚುನಾವಣೆಗೆ ಪೂರ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಚುನಾವಣಾ ಉದ್ದೇಶಕ್ಕಾಗಿ ನಿಯೋಜನೆಗೊಂಡ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಚುನಾವಣಾ ಪ್ರಯುಕ್ತ ಹೇಗೆ ಕರ್ತವ್ಯ ನಿರ್ವಹಿಸಬೇಕೆಂಬ ಬಗ್ಗೆ ತರಬೇತಿಯನ್ನು ನೀಡಲಾಗುತ್ತೆ ಎಂದರೆ ಸರಿ. ತರಬೇತಿ ಸಮಯದಲ್ಲಿ ಅನುಮಾನ ಬಂದಲ್ಲಿ ವಿಡಿಯೋ ಮತ್ತು ಸ್ತಬ್ಧ ಚಿತ್ರವನ್ನು ತೆಗೆಯಬೇಕೆಂಬ ಬಗ್ಗೆ ನಿರ್ದೇಶ ಇರುತ್ತದೆ ಎಂದರೆ ಸರಿ. ಘಟನಾ ದಿನಾಂಕದಂದು ನನ್ನೊಂದಿಗೆ ಛಯಾಗ್ರಾಹಕರು ಇದ್ದರೋ, ಇಲ್ಲವೋ ಎಂಬುದರ ಬಗ್ಗೆ ನನಗೆ ನೆನಪಿಲ್ಲ. ಚುನಾವಣಾ ಕರ್ತವ್ಯಕ್ಕೆ ನಿಯೋನೆಗೊಂಡ ಅಧಿಕಾರಿಗಳು ದಿನವಾರು ಮಾಡಿದ ಕರ್ತವ್ಯಗಳ ಬಗ್ಗೆ ನಮ್ಮ ಮೇಲಾಧಿಕಾರಿಗಳು ಜಿಲ್ಲಾಧಿಕಾರಿಯವರಿಗೆ ವರದಿಯನ್ನು ಸಲ್ಲಿಸಬೇಕು ಎಂದರೆ ಸರಿ. ಇಲಾಹಾವಾರು ಸಿಬ್ಬಂದಿಗಳನ್ನು ಯಾವ-ಯಾವ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು ಮತ್ತು ಅವರಿಗೆ ಒದಗಿಸಲಾದ ವಾಹನದ ಬಗ್ಗೆ ಮಾಹಿತಿ ಸಹ ನನ್ನ ಮೇಲಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಬೇಕು ಎಂದರೆ ಸರಿ.

2. ನಾನು ಘಟನಾ ದಿನಾಂಕದಂದು ಬಳಸಿದ ವಾಹನದ ನಂಬರ್ ನನಗೆ ನೆನಪಿಲ್ಲ. ಸದರಿ ವಾಹನವು ಖಾಸಗಿಯವರಿಗೆ ಸೇರಿದ್ದಾಗಿರುತ್ತದೆ. ನಾನು ಯಾವ ವಾಹನದಲ್ಲಿ ಘಟನಾ ದಿನಾಂಕದಂದು ಘಟನಾ ಸ್ಥಳಕ್ಕೆ ಹೋಗಿದ್ದೆ ಎಂಬುದರ ಬಗ್ಗೆ ಪೊಲೀಸರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ಮೇಲಾಧಿಕಾರಿಗಳು ಮಾಹಿತಿ ನೀಡಿರುತ್ತಾರೆ ಎಂದು ನುಡಿಯತ್ತಾರೆ. ನಾನು ಈ ಪ್ರಕರಣವನ್ನು ದಾಖಲು ಮಾಡಿದ ದಿವಸ ಪೊಲೀಸ್ ಠಾಣೆಗೆ ಹೋಗಿದು, ಅದನ್ನು ಹೊರತುಪಡಿಸಿ ನಾನು ಪುನಃ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಘಟನಾ ಸ್ಥಳದ ಮುಂಭಾಗದಲ್ಲಿಯೇ ಗ್ರಾಮಾಂತರ ಪೊಲೀಸ್ ಠಾಣೆ ಇರುತ್ತದೆ ಎಂದರೆ ನನಗೆ ನೆನಪಿಲ್ಲ ಗೊತ್ತಿಲ್ಲ. ಸಾಮಾನ್ಯವಾಗಿ ವಿಶೇಷ ಕರ್ತವ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳನ್ನು ಪೊಲೀಸರು ಕರ್ತವ್ಯ ನಿರ್ವಹಿಸುವ ಆಯಕಟ್ಟಿನ ಪ್ರದೇಶವನ್ನು ಹೊರತುಪಡಿಸಿ ಬೇರೆಡೆ ನಿಯೋಜಿಸಲಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವುಗಳು ನಮ್ಮ ಅಧಿಕಾರಿದ ಪರಿಮಿತಿಗೊಳಪಟ್ಟ ಪ್ರದೇಶಗಳಲ್ಲಿ ಸಂಚರಿಸಬಹುದಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಚುನಾವಣಾ ಸಮಯದಲ್ಲಿ ಬಾಡಿಕೇಡ್ ಗಳನ್ನು ಸರ್ಕಾರದಿಂದ ಅಳವಡಿಸಲಾಗಿರುತ್ತದೆ ಎಂದರೆ ಸರಿ. ನಾವು ಬೋಲೆರೋ ವಾಹವನ್ನು ಬ್ಯಾರಿಕೇಡ್ ಇದ್ದ ಕಡೆಯೇ ನಿಲ್ಲಿಸಿರುತ್ತೇವೆ. ನಾನು ಹೇಳುವ ನಿಗದಿತ ಸಮಯದಲ್ಲಿ ಸುಮಾರು 3 ರಿಂದ 4 ವಾಹನಗಳನ್ನು ತಪಾಸಣೆ ಮಾಡಿರುತ್ತೇನೆ. ಆ ಸಮಯ ಪಟ್ಟಣ ಪೊಲೀಸ್ ಠಾಣೆಯ ಪೊಲೀಸರು ಇದ್ದರು. ಆ ಸಮಯ ಸ್ವಯಂ ಪ್ರೇರಿತವಾಗಿ ಪಟ್ಟಣ ಪೊಲೀಸ್ ಠಾಣೆಯ 2 ರಿಂದ 3 ಪೊಲೀಸ್ ಸಿಬ್ಬಂದಿಗಳು ಇದ್ದರು. ನಾನು ಹೇಳುವ ಸನ್ನಿವೇಶವನ್ನು ಪೊಲೀಸರು ಸಹ ನೋಡಿರುತ್ತಾರೆ ಎಂದರೆ ಸರಿ. ನಾನು ಬೋಲೆರೋ ವಾಹನವನ್ನು ಗ್ರಾಮಾಂತರ ಪೊಲೀಸ್ ಠಾಣೆಯ ಮುಂಭಾಗದಲ್ಲಿ ನಿಲ್ಲಿಸಿದ್ದರು, ನಿಲ್ಲಿಸಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಟ್ಟಣ ಪೊಲೀಸ್ ಠಾಣೆಯವರು ಬ್ಯಾರಿಕೇಡ್ ಹಾಕಿದ್ದ ಸ್ಥಳದಲ್ಲಿ ನಿಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ತಡೆದು ನಿಲ್ಲಿಸಿದ ವಾಹನವನ್ನು ನೋಡಿದ ತಕ್ಷಣ ಅದು ಹಣ ಸಾಗಿಸುವ ವಾಹನ ಎಂಬುವುದು ಕಂಡು ಬರುತ್ತಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವಾಹನವು ಎ.ಟಿ.ಎಂ ಗೆ ಹಣ ಸಾಗಿಸುವ ವಾಹನ ಎಂದು ನುಡಿಯುತ್ತಾರೆ. ಸದರಿ ವಾಹನಕ್ಕೆ ಸಿ.ಸಿ ಟಿ.ವಿಯನ್ನು ಸಹ ಅಳವಡಿಸಲಾಗಿತ್ತು ಎಂದರೆ ಸಾಕ್ಷಿ ನಾನು ಅದನ್ನು ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ವಾಹನದಲ್ಲಿ ಇದ್ದ ಗನ್ ಮ್ಯಾನ್ ಅನ್ನು ವಿಚಾರಣೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ವಾಹನದಲ್ಲಿ ವಾಹನ ಚಾಲಕ ಸೇರಿ ಮೂರು ಜನ ವ್ಯಕ್ತಿಗಳು ಇದ್ದು ಅವರಲ್ಲಿ ಗನ್‌ಮ್ಯಾನ್

ಯಾರು ಎಂದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಘಟನಾ ದಿನಾಂಕದಂದು ವಿಡಿಯೋ ಚಿತ್ರೀಕರಣ ಮಾಡಲು ನಿಮಗೆ ಏನಾದರೂ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯತ್ತಾರೆ.

3. ಘಟನಾ ದಿನಾಂಕಂದು ನಾನು ಮತ್ತು ನನ್ನ ಮೇಲಾಧಿಕಾರಿಯಾದ ರವಿ ಇದ್ದೆವು. ಸಾಕ್ಷಿ ಮುಂದುವರೆದು ನಮ್ಮೊಂದಿಗೆ ಪೊಲೀಸ್ ಸಿಬ್ಬಂದಿ ಸಹ ಇದ್ದರು ಎಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ಅಧಿಕಾರಿ ನಡುವೆ ಯಾವುದೇ ಅಂಗ ಶೋಧನೆ ಆಗಿರುವುದಿಲ್ಲ. ಸಾಮಾನ್ಯವಾಗಿ ಎ.ಟಿ.ಎಂ ಗೆ ಹಣ ಸಾಗಿಸುವ ಸಮಯದಲ್ಲಿ ಸೂಕ್ತ ದಾಖಲಾತಿ ಎಂದರೆ ಏನು ಎಂಬ ಪ್ರಶ್ನೆಗೆ ಸಾಕ್ಷಿ ಚುನಾವಣಾ ನೀತಿಸಂಹಿತೆ ಜಾರಿಯಲ್ಲಿ ಇದ್ದುದ್ದರಿಂದ ಘಟನಾ ದಿನಾಂಕದಂದು ಬ್ಯಾಂಕಿಗೆ ಸಂಬಂಧಿಸಿದಂತ ಹಣ ಸಾಗಿಸಲು ಬ್ಯಾಂಕಿನ ಅಧಿಕಾರಿಗಳಿಂದ ಸದರಿ ಹಣವನ್ನು ಎಲ್ಲಿಂದ ಎಲ್ಲಿಗೆ ಸಾಗಿಸಲಾಗುತ್ತಿದೆ ಎಂಬುದರ ಬಗ್ಗೆ ದಾಖಲಾತಿಯ ಅವಶ್ಯಕತೆ ಇದ್ದು, ಸದರಿ ಘಟನಾ ದಿನಾಂಕದಂದು ಆರೋಪಿಗಳು ಅಂತಹ ಯಾವುದೇ ಸೂಕ್ತ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ, ನಾವು ಸೂಕ್ತ ದಾಖಲಾತಿಗಳನ್ನು ಹಾಜರುಪಡಿಸುವಂತೆ ಹೇಳಿದರು ಸಹ ಹಾಜರುಪಡಿಸುವುದಾಗಿ ತಿಳಿಸಿ, ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಘಟನಾ ದಿನಾಂಕದಂದು ಯಾವುದೇ ವಾಹನವನ್ನು ಹಿಡಿದ ಪಕ್ಷದಲ್ಲಿ ದಾಖಲಾತಿಗಳನ್ನು ಹಾಜರುಪಡಿಸುವಂತೆ ಕೇಳುವ ಅಧಿಕಾರಿ ಇತ್ತೆ ಎಂಬ ಪ್ರಶ್ನೆಗೆ ಸಾಕ್ಷಿ ಅದು ನನ್ನ ಮೇಲಾಧಿಕಾರಿಗಳಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಯಾವುದೇ ದಾಖಲಾತಿಯನ್ನು ಹಾಜರುಪಡಿಸಿದ ಸಮಯ ಅದರ ನೈಜಾಂಶವನ್ನು ಪರಿಶೀಲಿಸುವ ಅಧಿಕಾರ ನನ್ನ ಮೇಲಾಧಿಕಾರಿಗಳಿಗೆ ಇರುತ್ತದೆ. ಘಟನಾ ದಿನಾಂಕಕ್ಕಿಂತ ಪೂರ್ವದ ದಿನಗಳಲ್ಲಿ ಘಟನಾ ಸ್ಥಳದಲ್ಲಿ ನಾಕಾಬಂದಿ ಹಾಕಿ ವಾಹನಗಳನ್ನು ತಪಾಸಣೆ ಮಾಡಿರುವುದಿಲ್ಲ. ಈ ಹಿಂದೆ ಸದರಿ ಅಮಾನತ್ತು ಪಡಿಸಿಕೊಳ್ಳಲಾದ ವಾಹನವು ಸದರಿ ರಸ್ತೆಯಲ್ಲಿ ಓಡಾಡುತ್ತಿತ್ತೆ ಎಂಬುವರ ಬಗ್ಗೆ ನಿಮ್ಮ ಮೇಲಾಧಿಕಾರಿ ಏನಾದರೂ ಪೊಲೀಸರಿಂದ ಮಾಹಿತಿ ಪಡೆದಿದ್ದರೆ ಎಂಬ ಪ್ರಶ್ನೆಗೆ ಸಾಕ್ಷಿ ಅದರ ಮಾಹಿತಿ ಇರುವುದಿಲ್ಲ ಮತ್ತು ಆ ರೀತಿ ಮಾಹಿತಿ ಪಡೆಯುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ.

4. ಘಟನಾ ದಿನಾಂಕದಂದು ತಪಾಸಣೆ ಮಾಡಿದ ಇತರೇ 3–4 ವಾಹನಗಳ ನಂಬರ್ ಅನ್ನು ನೋಡಿರುವುದಿಲ್ಲ. ಜಪ್ತುಪಡಿಸಿಕೊಳ್ಳಲಾದ ಹಣವು ಯಾವ ಬ್ಯಾಂಕಿಗೆ ಸೇರಿದ್ದು, ಅದರಲ್ಲಿ ಯಾವ ಬ್ಯಾಂಕಿನ ಮೊಹರ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿ ನಾನು ನೋಡಿರುವುದಿಲ್ಲ, ಕೇವಲ ಹಣ ಬಂಡಲ್ ಅನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಗಳು ನನ್ನ ಮೇಲಾಧಿಕಾರಿಗೆ ಬ್ಯಾಂಕಿನ ಇಂಡೆಂಟ್

ಅನ್ನು ಹಾಜರುಪಡಿಸಿದ್ದನ್ನು ನಾನು ನೋಡಿರುತ್ತೇನೆ, ಆದರೆ ಸೂಕ್ತ ದಾಖಲಾತಿ ಇಲ್ಲದ ಕಾರಣ ಬಿಡುಗಡೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಇಂಡೆಂಟ್ ಯಾವ-ಯಾವ ಎ.ಟಿ.ಎಂ ಗೆ ಎಷ್ಟು ಎಷ್ಟು ಹಣ ಭರ್ತಿ ಮಾಡಬೇಕು ಎಂಬುದರ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಘಟನಾ ದಿನಾಂಕದಂದು ಆರೋಪಿಗಳು ಹಾಜರುಪಡಿಸಿಕ ಇಂಡೆಂಟ್ ನಲ್ಲಿ ಸೂಕ್ತ ಮಾಹಿತಿ ಇರಲಿಲ್ಲ ಹಾಗೂ ಸೂಕ್ತ ದಾಖಲಾತಿಯನ್ನು ಒದಗಿಸದ ಕಾರಣ ಬಿಡುಗಡೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಹಾಜರುಪಡಿಸಿದ ಇಂಡೆಂಟ್ ಸರಿ ಇಲ್ಲ ಎನ್ನುವುದು ನಮ್ಮ ಮೇಲಾಧಿಕಾರಿಗಳ ತೀರ್ಮಾನವಾಗಿರುತ್ತದೆ. ನಾವು ಠಾಣೆಗೆ ಹೋದಾಗ ಯಾವುದೇ ದಾಖಲೆಯನ್ನು ಪೊಲೀಸರಿಗೆ ನೀಡಿರುವುದಿಲ್ಲ. ನಾವು ವಾಹನವನ್ನು ಹಿಡಿದ ಸ್ವಲ್ಪ ಸಮಯಕ್ಕೆ ಎಸ್.ಪಿ ರವರು ಸಹ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಅವರ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು ಎಂದು ನುಡಿಯುತ್ತಾರೆ. ಘಟನಾ ದಿನಾಂಕದಂದು ಆರೋಪಿಗಳಿಂದ ವಶಪಡಿಸಿಕೊಳ್ಳಲಾದ ಹಣವು ಬ್ಯಾಂಕಿಗೆ ಸೇರಿದ್ದಾಗಿದ್ದು, ಈ ಸಂಬಂಧ ಸಂಪೂರ್ಣ ವಿಡಿಯೋ ಚಿತ್ರೀಕರಣ ಸಹ ಮಾಡಲಾಗಿತ್ತು ಎಂದರೆ ನನಗೆ ನೆನಪಿಲ್ಲ. ಚುನಾವಣಾ ಸಮಯ ಒಂದು ಪಕ್ಷದ ಹೆಸರಿಗೆ ಕೆಟ್ಟ ಹೆಸರು ತರುವ ಉದ್ದೇಶದಿಂದ ನಮ್ಮನ್ನು ದಾಳವಾಗಿ ಉಪಯೋಗಿಸಿಕೊಂಡು ಆರೋಪಿಗಳ ವಿರುದ್ಧ ಈ ಪ್ರಕರಣವನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕರ್ತವ್ಯ ಲೋಪದಿಂದ ಸಾರ್ವಜನಿಕರಿಗೆ ಸರಿಯಾದ ಸಮಯದಲ್ಲಿ ಎ.ಟಿ.ಎಂ ನಿಂದ ದೊರಕಬೇಕಾದ ಹಣವು ದೊರಕದಂತೆ ಆಗಿದ್ದು, ಅದಕ್ಕೆ ನೇರವಾಗಿ ನಾವೇ ಹೊಣೆಗಾರರಾಗಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸೂಕ್ತ ದಾಖಲಾತಿಗಳನ್ನು ಒದಗಿಸದೇ ಇದ್ದ ಕಾರಣ ಹಣವನ್ನು ಹಿಂದಿರುಗಿಸುವುದಿಲ್ಲ ಎಂದು ನುಡಿಯುತ್ತಾರೆ. ಈ ಘಟನಾ ಸಂಬಂಧ ಒಂದು ದಿನ ಪತ್ರಿಕೆಯಲ್ಲಿಯೂ ಪ್ರಕಟಣೆ ಮಾಡಲಾಗಿತ್ತು ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳಿಂದ ಅಮಾನತ್ತು ಪಡಿಸಿಕೊಳ್ಳಲಾದ ಹಣ ಬ್ಯಾಂಕಿಗೆ ಸಂಬಂಧಪಟ್ಟ ಹಣ ಎಂದು ಗೊತ್ತಿದ್ದರು, ಆ ಸಮಯ ವಿಡಿಯೋ ಚಿತ್ರೀಕರಣ ಮಾಡಿದ್ದರು ಸಹ ನಾವು ನೀಡಿದ ಸುಳ್ಳು ದೂರನ್ನು ಸಮರ್ಥಿಸಿಕೊಳ್ಳುವ ಉದ್ದೇಶದಿಂದ ಸುಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಘಟನಾ ದಿನಾಂಕದಂದು ಸೂಕ್ತ ದಾಖಲೆಗಳನ್ನು ನಮಗೆ ಹಾಜರುಪಡಿಸಿದ್ದರು ಸಹ ಪುಕ್ಕಟೆ ಪ್ರಚಾರ ಪಡೆಯುವ ಉದ್ದೇಶದಿಂದ ಈ ಪ್ರಕರಣವನ್ನು ಆರೋಪಿಗಳ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಂದ ಅಮಾನತ್ತು ಪಡಿಸಿಕೊಳ್ಳಲಾದ ಹಣದ

ಬಂಡಲ್ ಗಳ ಮೇಲೆ ಭಾರತೀಯ ರಿಸರ್ವ್ ಬ್ಯಾಂಕಿನ ಸೀಲು ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಣದ ಬಂಡಲ್ ಇತ್ತು ಎಂದು ನುಡಿಯುತ್ತಾರೆ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿಗಳ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**